ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ವಿಧಾನಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯಕರ್ನಾಟಕ

ದಿನಾಂಕ : DATE : 15/3/21

# ಇಂದಿನಿಂದ ಮತ್ತೆ ಕಲಾಪ

■ ವಿಕ ಸುದ್ದಿಲೋಕ ಬೆಂಗಳೂರು

ನಾಲ್ಕು ದಿನದ ವಿರಾಮದ ಬಳಿಕ ಬಜೆಟ್ ಅಧಿವೇಶನ ಸೋಮವಾರದಿಂದ ಪುನಃ ಆರಂಭವಾಗಲಿದೆ. ಆಯವ್ಯಯದ ಮೇಲಿನ ಚರ್ಚೆ ಸೇರಿದಂತೆ ಸರಕಾರದ ವಿರುದ್ಧ ಮುಗಿಬೀಳಲು ಪ್ರತಿಪಕ್ಷಗಳು ಸಜ್ಜಾಗಿವೆ.

ಇದರ ಮಧ್ಯೆ ಸರಕಾರದ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವ ಸಂಬಂಧ ಸಮಾಲೋಚಿಸಲು ಸಂಪುಟದ ಸಹೋದ್ಯೋಗಿಗಳೊಂದಿಗೆ ಕಲಾಪ ಆರಂಭಕ್ಕೂ ಮೊದಲು ಸಿಎಂ ಅನೌಪಚಾರಿಕ ಸಭೆ ನಡೆಸಲಿದ್ದಾರೆ.

**ಚರ್ಚೆಗೆ ಸ್ವಾಗತ:** ಅಧಿವೇಶನದಲ್ಲಿ ಪ್ರತಿಪಕ್ಷಗಳ ಟೀಕೆ, ಟಿಪ್ಪಣಿಗೆ ಸ್ವಾಗತವಿದೆ. ವಿಷಯಾಧಾರಿತವಾಗಿ ಅವರು ಚರ್ಚಿಸಲಿ. ಅದರ ಆಧಾರದಲ್ಲಿ ಬಗೆ ಕ್ರಮ ಕೈಗೊಳ್ಳಲು ಸರಕಾರಕ್ಕೆ ಅನುಕೂಲವಾಗಲಿದೆ ಎಂದು ಸಿಎಂ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಭಾನುವಾರ ಮಾತನಾಡಿದ ಅವರು, "ಪ್ರತಿಪಕ್ಷದ ನಾಯಕರು ಯಾವುದೇ ವಿಚಾರ ಪ್ರಸ್ತಾಪಿಸಬಹುದು. ಅದಕ್ಕವರಿಗೆ ಸ್ವಾತಂತ್ರ್ಯವಿದೆ. ಸಿದ್ದರಾಮಯ್ಯ ಅವರು ಯಾವ ವಿಚಾರ ಪ್ರಸ್ತಾಪಿಸಿದರೂ ಸ್ವಾಗತ. ಅದರಿಂದ ನಮ್ಮ ಮಂತ್ರಿಗಳೂ ಎಚ್ಚೆತ್ತುಕೊಂಡು ಕೆಲಸ ಮಾಡಲು ಸಹಾಯಕವಾಗಲಿದೆ," ಎಂದಿದ್ದಾರೆ.

**ಯತ್ನಾಳ್ ಜತೆ ಮಾತಾಡಿದ್ದೇನೆ:** ಪಂಚಮಸಾಲಿ ಮೀಸಲು ಹೋರಾಟ ಸಂಬಂಧ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಸೋಮವಾರ ಧರಣಿ ನಡೆಸುವ ಎಚ್ಚರಿಕೆ ನೀಡಿರುವ ಬಗ್ಗೆ ಗಮನ ಸೆಳೆದಾಗ, "ಅವರೊಂದಿಗೆ ಈಗಾಗಲೇ ಮಾತನಾಡಿದ್ದೇನೆ. ಈ ಬಗ್ಗೆ ಹೆಚ್ಚು ಚರ್ಚಿಸಲು ಬಯಸುವುದಿಲ್ಲ. ಸದನದಲ್ಲಿ ಸಮರ್ಥವಾಗಿ ಉತ್ತರ ಕೊಡುವ ಬಗ್ಗೆ ನಮ್ಮ ನಾಯಕರೊಂದಿಗೆ ಮಾತುಕತೆ ನಡೆಸುತ್ತೇನೆ," ಎಂದು ಪ್ರತಿಕ್ರಿಯಿಸಿದ್ದಾರೆ.